ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಡಿಸ್ಕಷನ್ ಇಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಡಿಸ್ಕಷನ್ ಅಲ್ಲ. ಎರಡು ಕ್ಲಾರಿಫಿಕೇಷನ್ ನಾನು ಕೇಳುತ್ತಾ ಇರುವುದು. ಆ ಬ್ಯಾನ್ ಮಾಡಿರತಕ್ಕ ಆರ್ಡರನ್ನು ವಾಪಸ್ ತೆಗೆದುಕೊಳ್ಳಬೇಕು. ಲಾಕೌಟ್ ಬ್ಯಾನ್ ಮಾಡಿರತಕ್ಕ ಆರ್ಡರ್ ಫೈಲ್ ಇವರ ಮುಂದೆ ಇದೆ. ಅದಕ್ಕೆ ಲೌಕೌಟನ್ನು ಬ್ಯಾನ್ ಮಾಡಬೇಕು ಎಂಬುದು ಒಂದು ಪ್ರಶ್ನೆ. ಆ ಕಾರ್ಮಿಕ ಕಾರ್ಯದರ್ಶಿ ಅವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು, ಕಾರ್ಮಿಕರಿಗೆ ರಕ್ಷಣೆ ಕೊಡಬೇಕು. ಗೂಂಡಾಗಿರಿ ನಡೆಯುತ್ತಾ ಇದೆ. ದಬ್ಬಾಳಿಕೆ ನಡೆಯುತ್ತಿದೆ. ಇದರ ಬಗ್ಗೆ ಕ್ಲಾರಿಫಿಕೇಷನ್ ನಾನು ಕೇಳುತ್ತಿದ್ದೇನೆ. ಇವು ಮೂರು ಮುಖ್ಯವಾದಂಥ ವಿಷಯಗಳು, ಅದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳು ಹೇಳಬೇಕಾಗಿದೆ. ಲಾಕೌಟ್ ಬ್ಯಾನ್ ಮಾಡಬೇಕು.

ಅಧ್ಯಕ್ಷರು : ಆಯಿತು. ರಿಪಿಟಿಷನ್ ಬೇಡಿ.

ಶ್ರೀ ಸಿ. ಗುರುನಾಥ್ : ಅಧ್ಯಕ್ಷರೇ, ಕಾನೂನಿನ ಅಡಿಯಲ್ಲಿ ಅದು ಬ್ಯಾನ್ ಮಾಡಬೇಕಾದರೆ ಬ್ಯಾನ್ ಮಾಡೋಣ.

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿ, ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ, ಇವರು ಮಂಡಿಸಬೇಕಾಗಿದ್ದ ವರದಿಯನ್ನು ಅವರ ಪರವಾಗಿ ನಾನು ಮಂಡಿಸುತ್ತೇನೆ.

## 2) ಗ್ರಾನೈಟ್ ಹಗರಣದ ಬಗ್ಗೆ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾನೈಟ್ ಹಗರಣದ ಬಗ್ಗೆ ತಾವು ಸದನ ಸಮಿತಿಯನ್ನು ಮಾಡಿರತಕ್ಕಂಥದ್ದು ಗೊತ್ತಿರತಕ್ಕಂಥ ವಿಚಾರ. ಹಾಗೆಯೇ ಸಿ.ಓ.ಡಿ. ಗೂ ತನಿಖೆ ಮಾಡುವುದಕ್ಕೆ ಸರ್ಕಾರ ಆದೇಶ ಕೊಟ್ಟಿದೆ. ಒಂದು ಕಡೆ ಸದನ ಸಮಿತಿ ಮಾಡಿ ಇನ್ನೊಂದು ಕಡೆ ಸಿ.ಓ.ಡಿ.ಗೆ ತನಿಖೆ ಮಾಡಲಿಕ್ಕೆ ಅವಕಾಶ ಕೊಟ್ಟಿರತಕ್ಕ ಈ ಸಂದರ್ಭದಲ್ಲಿ ನಿನ್ನೆ ಪತ್ರಿಕೆಯಲ್ಲಿ ಒಂದು ಇಂಟೀರಿಯಂ ರಿಪೋರ್ಟನ್ನು ಸಿ.ಓ.ಡಿ.ಯವರು ಬಿಡುಗಡೆ ಮಾಡಿದ್ದಾರೆ. ಸದನ ಸಮಿತಿ ಅಸ್ತಿತ್ವದಲ್ಲಿರಬೇಕಾದರೆ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಸಿ.ಓ.ಡಿ.ಯವರು ಗೌಪ್ಯವಾಗಿ ಇಡದೆ ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರಿಂದ ಸದನ ಸಮಿತಿಯವರು ಏನು ತನಿಖೆ ಮಾಡುತ್ತಿದ್ದಾರೋ ಆ ತನಿಖೆಗೆ ಅಡ್ಡಿ ಬರತಕ್ಕದು ಸಹಜವಾಗಿದೆ. ಈಗ ಸಿ.ಓ.ಡಿ. ಯವರು ಒಂದು ತರಹ ರಿಪೋರ್ಟ್ ಸದನ ಸಮಿತಿಯವರು ಒಂದು ತರಹ ರಿಪೋರ್ಟ್ ಕೊಟ್ಟು ಈ ವ್ಯತ್ಯಾಸಗಳು ಬಂದಾಗ ಜನಗಳಲ್ಲಿ ಸಂಶಯ ಮೂಡುವುದಕ್ಕೆ ಅವಕಾಶ ಆಗುತ್ತದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಯೇ ಇದ್ದಾರೆ. ಅವರು ಇದರ ಬಗ್ಗೆ ಹೇಳಬೇಕು. ಗೌಪ್ಯವನ್ನು ಕಾಪಾಡದೆ ಈ ರೀತಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದು ನನಗನ್ನಿಸುತ್ತದೆ...

ಅಧ್ಯಕ್ಷರು : ಇಲ್ಲಿ ಬಿಡಿ. ಸದನ ಸಮಿತಿಯನ್ನು ನಾವು ಇತ್ತೀಚೆಗೆ ಮಾಡಿದ್ದೇವೆ. ಸಿ.ಓ.ಡಿ. ಎನಕ್ವೈಯರಿಗೆ ಮೊದಲೇ ಒಪ್ಪಿಸಿದರು. ಒಪ್ಪಿದಮೇಲೆ ಸರ್ಕಾರಿ ನೌಕರರು ಅವರ ಕೆಲಸ ಅವರು ಮಾಡಿದ್ದಾರೆ. ಸಂಶಯ ಏನೂ ಬರುವುದಿಲ್ಲ ಬಿಡಿ. ಸಿ.ಓ.ಡಿ. ರಿಪೋರ್ಟ್ ಏನು ನಮ್ಮ ಸದಸ್ಯ ಸಮಿತಿ ಮೇಲೆ ಬೈಡಿಂಗೆ? ಅವರಿಗೆ ಮೊದಲು ಜವಾಬ್ದಾರಿ ವಹಿಸಿದ್ದರು. ಅವರ ಕೆಲಸ ಅವರು ಮಾಡಿದ್ದಾರೆ. ಏನೂ ಸಂಶಯ ಬರುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಅಲ್ಲ, ತನಿಖೆಗೆ ಅಡ್ಡಿಯಾಗುತ್ತದೆ ಎಂದಷ್ಟೆ,

ಅಧ್ಯಕ್ಷರು : ಸದನ ಸಮಿತಿಯ ಪರಮೋಚ್ಚ ಅಧಿಕಾರ ನಮ್ಮಲ್ಲಿ ಉಳಿದಿದೆ. ನಾಗೇಗೌಡರಲ್ಲಿ ನಮಗೆ ವಿಶ್ವಾಸ ಇದೆ. ಅವರು ನಿಮ್ಮ ಜಿಲ್ಲೆಯವರೇ ನಿಮಗೂ ಗೊತ್ತು. ಅವರು ಯಶಸ್ವಿಯಾಗಿ ಕೆಲಸ ಮಾಡುತ್ತಾರೆ. ಸಂಶಯಗಳಿಗೆ ಅವಕಾಶ ಇಲ್ಲ. ನಿಮ್ಮ ಸಂಶಯವನ್ನು ನಾನು ನಿವಾರಣೆ ಮಾಡಿದ್ದೇನೆ. ಈಗ ಗಮನ ಸೆಳೆಯುವ ಸೂಚನೆ ಇತ್ತಲ್ಲ ನೀವೆಲ್ಲಾ ಸೇರಿ ಕೊಟ್ಟಿದ್ದು ಅದಕ್ಕೆ...

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಹೇಳಿದ್ದುದನ್ನು ಒಪ್ಪುತ್ತೇನೆ. ಇಲ್ಲ ಎಂದಲ್ಲ, ನಮಗೇನು ಸಂಶಯ ಇದೆ ಎಂದರೆ ಸದನ ಸಮಿತಿ ಮಾಡತಕ್ಕ ತನಿಖೆಗೆ ಅಡ್ಡಿಯಾಗಬೇಕು ಎಂದು ಹೇಳಿ ಯಾರದೋ ಕೈವಾಡ ಇದರ ಹಿಂದೆ ಇದೆ, ಇದನ್ನು ಬಿಡುಗಡೆ ಮಾಡಲಿಕ್ಕೆ ಎನ್ನತಕ್ಕಂಥದ್ದು.

ಅಧ್ಯಕ್ಷರು : ಈ ಭೂಲೋಕದಲ್ಲಿ ಯಾರೂ ನಮ್ಮ ಸದನ ಸಮಿತಿಗೆ ಅಡ್ಡ ಬರುವುದಕ್ಕಾಗುವುದಿಲ್ಲ. ನಿಮಗೆ ಆ ಸಂಶಯವೇ ಬೇಡ.

ಶ್ರೀ ಕೆ. ಎನ್. ನಾಗೇಗೌಡ : ಈ ಸದನ ಮುಗಿಯುವುದರೊಳಗಾಗಿ ಈ ಕಾಲಿಂಗ್ ಅಟೆನಷನ್ ಹಾಕಿಬಿಡಿ ಸಾರ್.

ಅಧ್ಯಕ್ಷರು : ಆಗಬಹುದು.

## ದ. ಅ ನಿಯಮ 351ರ ಅಡಿಯಲ್ಲಿ ಬರುವ ಸೂಚನೆಗಳು

**1) ರೋಣ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಕತ್ತೆಕಿರುಬಗಳ ಹಾವಳಿ.**

ಶ್ರೀ ಶ್ರೀಶೈಲಪ್ಪ ಬಿದನೂರು (ರೋಣ) : ರೋಣ ತಾಲ್ಲೂಕಿನ ಕುಂಟೋಜಿ, ವದೆಗೊಳ, ಮ್ಯಾಕಲಜಿಯರಿ ಇನ್ನೂ ಹಲವಾರು ಗ್ರಾಮಗಳಲ್ಲಿ ದಿನಾಂಕ 13-9-1995 ರಂದು ಸಾಯಂಕಾಲ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರಿಗೆ ಕುಂಟೋಜಿ ಗುಡ್ಡದ ಬಳಿ ಮಾರಣಾಂತಿಕ ಹಲ್ಲೆ ನಡೆಸಿದ ಕತ್ತೆ ಕಿರುಬವನ್ನು ಅರಣ್ಯ ಇಲಾಖೆಯವರು ಕೊಂದಿದ್ದು ಇದೀಗ ಅಲ್ಲಿ ವಾಸ ಮಾಡುತ್ತಿರುವ ಇನ್ನೂ 25-30 ಕತ್ತೆ ಕಿರುಬಗಳನ್ನು ವಧಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಇದರಲ್ಲಿ ಹಲ್ಲೆಗೊಳಗಾದವರಿಗೆ ಸರ್ಕಾರ ಏನಾದರೂ ಪರಿಹಾರ ಕೊಡುವ ಬಗ್ಗೆ ಚಿಂತನೆ ನಡೆಸಿದೆಯೆ? ಜನರು ಭಯಭೀತರಾಗಿದ್ದು ಮಾನಸಿಕವಾಗಿ ಆಘಾತಕ್ಕೊಳಗಾಗಿದ್ದು ಸರ್ಕಾರ ಈ ಜನರಿಗೆ ಧೈರ್ಯ ತುಂಬುವ ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ?